# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **861** |
| ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 15-12-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| ಪ್ರಶ್ನೆ | | ಉತ್ತರ |
|---|---|---|
| ಅ) | ವಿದ್ಯುತ್ ಉತ್ಪಾದನೆ, ಪ್ರಸರಣ ಮತ್ತು ವಿತರಣೆಯಲ್ಲಿ ಎದುರಾಗುವ ಪ್ರಮುಖ ಸವಾಲುಗಳು ಯಾವುವು; | **1. ಕವಿನಿನಿಗೆ ವಿದ್ಯುತ್ ಉತ್ಪಾದನೆಯಲ್ಲಿ ಎದುರಾಗುವ ಪ್ರಮುಖ ಸವಾಲುಗಳು ಈ ಕೆಳಕಂಡಂತಿವೆ:**<br><br>i. ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ Flexible Operation ಸವಾಲುಗಳು:<br>ರಾಜ್ಯ ಗ್ರಿಡ್‌ನಲ್ಲಿ ನವೀಕರಿಸಬಹುದಾದ ಇಂಧನದ ತ್ವರಿತ ಹೆಚ್ಚಳದೊಂದಿಗೆ, ಉಷ್ಣ ವಿದ್ಯುತ್ ಸ್ಥಾವರಗಳು ಇತ್ತೀಚಿನ ದಿನಗಳಲ್ಲಿ ಮೇಲಿಂದ ಮೇಲೆ ರ್‍ಯಾಂಪಿಂಗ್, ಕಡಿಮೆ-ಲೋಡ್ ಕಾರ್ಯಾಚರಣೆ ಮತ್ತು ಗ್ರಿಡ್ ವ್ಯತ್ಯಾಸಗಳಿಗೆ ತ್ವರಿತ ಪ್ರತಿಕ್ರಿಯೆ ಸೇರಿದಂತೆ ಹೆಚ್ಚು ಹೊಂದಿಕೊಳ್ಳುವ ಪರಿಸ್ಥಿತಿಗಳಲ್ಲಿ ಕಾರ್ಯನಿರ್ವಹಿಸುವ ಅಗತ್ಯವಿದೆ. ಸದರಿ ಚಾಲನಾ ಕ್ರಮವು ಬಾಯ್ಲರ್‌ಗಳ ಬಾಳಿಕೆಯ ಅವಧಿಯನ್ನು ಕ್ಷೀಣಗೊಳಿಸುತ್ತದೆ. ಉಪಕರಣಗಳ ಸವಕಳಿಯ ವೇಗವನ್ನು ಹೆಚ್ಚಿಸುತ್ತದೆ ಹಾಗೂ ಕಾರ್ಯಕ್ಷಮತೆಯನ್ನು ಕುಂಠಿತಗೊಳಿಸುತ್ತದೆ. ಇದರಿಂದ, ಹಳೆಯ ಘಟಕಗಳು ಸದರಿ ಏರಿಳಿತಗಳನ್ನು ಸಕ್ಷಮವಾಗಿ ಎದುರಿಸುವುದು ಕಷ್ಟಕರವಾಗಿರುತ್ತದೆ.<br><br>ii. ಹಳೆಯದಾಗುತ್ತಿರುವ ಆರ್‌ಟಿಪಿಎಸ್ ಘಟಕಗಳು:<br>ರಾಯಚೂರು ಉಷ್ಣ ವಿದ್ಯುತ್ ಸ್ಥಾವರದ (RTPS) ಬಹುತೇಕ ಘಟಕಗಳು 35 ವರ್ಷಗಳಿಗೂ ಹೆಚ್ಚು ಕಾಲ ಕಾರ್ಯನಿರ್ವಹಿಸಿದ್ದು, ಉಪಕರಣಗಳ ಕಾರ್ಯಕ್ಷಮತೆ ಕಾಲಕ್ರಮೇಣ ಕ್ಷೀಣಿಸುತ್ತಿದೆ. ಇದರಿಂದಾಗಿ ಘಟಕಗಳ ಒಟ್ಟಾರೆ ದಕ್ಷತೆ ಇಳಿಮುಖವಾಗುತ್ತಿದೆ.<br><br>iii. ಪ್ರಾಕೃತಿಕ ಸವಾಲುಗಳು:<br>ಜಲ ವಿದ್ಯುತ್ ಸ್ಥಾವರಗಳ ಆಣೆಕಟ್ಟುಗಳ ನೀರಿನ ಪ್ರಮಾಣ ಕಳೆದ ವರ್ಷಕ್ಕೆ ಹೋಲಿಸಿದರೆ ಕಡಿಮೆ ಇದ್ದು, ನೀರಿನ ಲಭ್ಯತೆಯ ಅನುಗುಣವಾಗಿ ಜಲ ವಿದ್ಯುತ್ ಘಟಕಗಳಿಂದ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ 768 ಮಿ.ಯೂ ವಿದ್ಯುತ್ ಉತ್ಪಾದನೆಯ ಕೊರತೆ ಇದೆ.<br><br>**2. <u>ವಿದ್ಯುತ್ ಪ್ರಸರಣದಲ್ಲಿ ಎದುರಾಗುವ ಪ್ರಮುಖ ಸವಾಲುಗಳು ಈ ಕೆಳಗಿನಂತಿವೆ:</u>**<br><br>ಭೂಮಿಯ ಲಭ್ಯತೆ ಮತ್ತು ಅನುಮತಿ ಪಡೆಯುವ ಕುರಿತ ಸವಾಲುಗಳು:<br>• ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳ ವ್ಯಾಪ್ತಿಯಲ್ಲಿ ನೂತನ ವಿದ್ಯುತ್ ಸ್ಟೇಷನ್ ನಿರ್ಮಿಸಲು ಭೂಮಿಯನ್ನು ಕವಿಪ್ರನಿನಿಗೆ ಸ್ವಾಧೀನಪಡಿಸಿಕೊಳ್ಳುವುದು.<br>• ನೂತನ ಪ್ರಸರಣ ಮಾರ್ಗ ನಿರ್ಮಾಣ ಮಾಡಲು ಮತ್ತು ಅಸ್ತಿತ್ವದಲ್ಲಿರುವ ಪ್ರಸರಣ ಮಾರ್ಗದ ವಿಸ್ತರಣೆಗೆ ಅಥವಾ ಅದರ ಬದಲೀಕರಣ ಮಾಡಲು ಪ್ರಸರಣ ಮಾರ್ಗದ ರಹದಾರಿ(RoW) ಸಮಸ್ಯೆ ಬಗೆಹರಿಸುವುದು, ರೈತರ ಜಮೀನುಗಳ ಮೇಲೆ ಹಾದು ಹೋಗುವ ಪ್ರಸರಣ ಮಾರ್ಗಗಳಿಗೂ ರೈತರು ಅಡ್ಡಿಪಡಿಸುತ್ತಿರುವುದು ಮತ್ತು ಹೆಚ್ಚಿನ ಪರಿಹಾರವನ್ನು ಕೋರುತ್ತಿರುವುದು. ಸದರಿ ಸಮಸ್ಯೆಗಳನ್ನು ಬಗೆಹರಿಸಿ ನಿಗದಿತ ಸಮಯದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕಷ್ಟವಾಗುತ್ತದೆ.<br>• ಪಶ್ಚಿಮ ಘಟ್ಟ ಪ್ರದೇಶ ಮತ್ತು ಇತರೆ ಅರಣ್ಯಪ್ರದೇಶಗಳಲ್ಲಿ ಸ್ಟೇಷನ್ ಮತ್ತು ಪ್ರಸರಣ ಮಾರ್ಗ ನಿರ್ಮಾಣ ಮಾಡಲು ಪರಿಸರ ಮತ್ತು ಅರಣ್ಯ ಇಲಾಖೆಯ ಅನುಮತಿ ಪಡೆಯುವುದು. |

| | | |
|---|---|---|
| | | 3. <u>ವಿದ್ಯುತ್ ವಿತರಣಾ ಸರಬರಾಜಿನಲ್ಲಿ ಎದುರಾಗುವ ಪ್ರಮುಖ ಸವಾಲುಗಳು ಈ ಕೆಳಗಿನಂತಿವೆ:</u><br>• ವಿದ್ಯುತ್ ವಿತರಣಾ ಕಂಪನಿ ವ್ಯಾಪ್ತಿಗಳಲ್ಲಿ ದಿನ ದಿನೇ ವಿದ್ಯುತ್ ಬೇಡಿಕೆ ಹೆಚ್ಚಾಗುತ್ತಿರುವುದರಿಂದ ವಿದ್ಯುತ್ ಜಾಲವನ್ನು ಉನ್ನತೀಕರಿಸಲು RoW ಸಮಸ್ಯೆಗಳನ್ನು ಬಗೆಹರಿಸುವುದು.<br>• ಪ್ರಕೃತಿ ವಿಕೋಪದ ಸಂದರ್ಭಗಳಾದ ಭಾರಿ ಮಳೆ, ಬಿರುಗಾಳಿ, ಪ್ರವಾಹ ದಿಂದ ವಿದ್ಯುತ್ ವಿತರಣಾ ಜಾಲಕ್ಕೆ ಉಂಟಾಗುವ ಹಾನಿಗಳನ್ನು ಸರಿಪಡಿಸಿ ವಿದ್ಯುತ್ ಜಾಲವನ್ನು ಪುನಃ ಸ್ಥಾಪಿಸಿ ವಿದ್ಯುತ್ ಪೂರೈಕೆ ಮಾಡುವುದು<br>• ಅರಣ್ಯ / ಮಲೆನಾಡು /ಗುಡ್ಡ ಪ್ರದೇಶಗಳಲ್ಲಿ ವಿದ್ಯುತ್ ಜಾಲ ವಿಸ್ತರಣೆ ಮತ್ತು ನಿರ್ವಹಣೆ ಮಾಡುವುದು.<br>• ಹಳೆಯ ಟ್ರಾನ್ಸ್‌ಫಾರ್ಮರ್‌ಗಳು ಮತ್ತು ಮೂಲಸೌಕರ್ಯದಿಂದ ಉಂಟಾಗುವ ಸಮಸ್ಯೆ ಬಗೆಹರಿಸುವುದು.<br>• ಮೀಟರ್ ಬೈಪಾಸಿಂಗ್, ಅಕ್ರಮ ಹುಕಿಂಗ್‌ಗಳು, ಅನಧಿಕೃತ ಲೈನ್ ವಿಸ್ತರಣೆಗಳಂತಹ ಕಳ್ಳತನಗಳ ಪ್ರಕರಣಗಳು.<br>• ವಿತರಣಾ ಜಾಲದಲ್ಲಿ ಸೈಬರ್ ಸೆಕ್ಯೂರಿಟಿ ಖಾತ್ರಿ ಪಡಿಸುವುದು<br>• ವಿತರಣಾ ಮಾರ್ಗ ನಿರ್ಮಾಣವಾದ ನಂತರ ಅದರ ಕೆಳಗೆ ಸುರಕ್ಷತೆ ಅನುಸರಿಸದೇ ಗ್ರಾಹಕರು ತಮ್ಮ ಕಟ್ಟಡಗಳನ್ನು ಮೇಲಕ್ಕೆ ಏರಿಸಿ ವಿಸ್ತರಣೆ ಮಾಡುವುದು. |
| ಆ) | ಲೈನ್‌ಮನ್ ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡುವ ಮೂಲಕ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; | ಹಾಲಿ ಚಾಲ್ತಿಯಲ್ಲಿರುವ ನೇಮಕಾತಿ ನಿಯಮಾನುಸಾರ ರಾಜ್ಯ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳಲ್ಲಿರುವ ಅಭ್ಯರ್ಥಿಗಳು ನೇರ ನೇಮಕಾತಿಯಲ್ಲಿ ಭಾಗವಹಿಸಲು ಅವಕಾಶವಿರುತ್ತದೆ. |
| ಇ) | ಕಳೆದ ಮೂರು ವರ್ಷಗಳಲ್ಲಿ ಉಷ್ಣ ವಿದ್ಯುತ್ ಸ್ಥಾವರಗಳ ಕಾರ್ಯಕ್ಷಮತೆ ಮತ್ತು ಸಾಧನೆಗಳು ಏನು; (ಮಾಹಿತಿ ನೀಡುವುದು) | ಕವಿನಿನಿಯ ಕಳೆದ 3 ವರ್ಷಗಳ ಕಾರ್ಯಕ್ಷಮತೆ ಮತ್ತು ಸಾಧನೆಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| ಈ) | ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಯಲ್ಲಿ ಒಂದಾದ 'ಗೃಹಜ್ಯೋತಿ' ಯೋಜನೆಯಿಂದ ಎಷ್ಟು ಫಲಾನುಭವಿಗಳಿಗೆ ಉಪಯೋಗವಾಗಿದೆ; ಮತ್ತು ಈ ಗ್ಯಾರಂಟಿಯಿಂದ ವಂಚಿತರಾದ ಫಲಾನುಭವಿಗಳು ರಾಜ್ಯದಲ್ಲಿ ಇದ್ದಾರೆಯೇ? (ವಿವರ ನೀಡುವುದು) | 1. ಗೃಹ ಜ್ಯೋತಿ ಯೋಜನೆಯಡಿ ಜುಲೈ-2023 ರಿಂದ ಅಕ್ಟೋಬರ್-2025 ರವರೆಗೆ ಮಾಹೆಯಾನ ಸರಾಸರಿ ಒಟ್ಟು 1,65,24,546 ಫಲಾನುಭವಿಗಳು ಈ ಯೋಜನೆಯ ಸೌಲಭ್ಯ ಪಡೆದಿರುತ್ತಾರೆ.<br>2. ವಿದ್ಯುತ್ತನ್ನು ಗೃಹ ಬಳಕೆಗೋಸ್ಕರ ಉಪಯೋಗಿಸುತ್ತಿರುವ ಏಕಮಾತ್ರ ಸ್ಥಾವರಗಳಿಗೆ ಮಾತ್ರ ಗೃಹ ಜ್ಯೋತಿ ಯೋಜನೆಯು ಅನ್ವಯಿಸುತ್ತದೆ ಗೃಹ ಜ್ಯೋತಿ ಯೋಜನೆಯ ಸೌಲಭ್ಯ ಪಡೆಯಲು ಗ್ರಾಹಕರು ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ನೊಂದಾಯಿಸಿಕೊಂಡಿರುವ ಗೃಹಬಳಕೆಯ ವಿದ್ಯುತ್ ಸ್ಥಾವರಗಳಿಗೆ ನಿರ್ದಿಷ್ಟ ಪಡಿಸಿರುವ ಮಾಹೆಯಾನ ಅರ್ಹತೆ ಯುನಿಟ್‌ಗಳ ಮಿತಿಯಲ್ಲಿನ ಬಳಕೆಯ ಬಿಲ್ಲಿನ ಮೊತ್ತವನ್ನು ಗೃಹಜ್ಯೋತಿ ಯೋಜನೆಯಡಿ ಸರ್ಕಾರದಿಂದ ಪಾವತಿಸಲಾಗುತ್ತಿದೆ.<br>3. ಗೃಹಜ್ಯೋತಿ ಯೋಜನೆಯಿಂದ ವಂಚಿತರಾಗಿರುವ (ಅರ್ಹರಿದ್ದು ಸೇವಾಸಿಂಧು ತಂತ್ರಾಂಶದಲ್ಲಿ ನೊಂದಾಯಿಸದಿರುವ ಸ್ಥಾವರಗಳನ್ನು ಹೊರತುಪಡಿಸಿ) ಫಲಾನುಭವಿಗಳು ಇರುವುದಿಲ್ಲ. |

ಸಂಖ್ಯೆ: ಎನರ್ಜಿ 296 ಇಬಿಎಸ್ 2025

(ಕೆ.ಜೆ.ಜಾರ್ಜ್) 12/12/25
ಇಂಧನ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 861 ಕ್ಕೆ ಅನುಬಂಧ**

ಕಳೆದ ಮೂರು ವರ್ಷಗಳಲ್ಲಿ ಉಷ್ಣ ವಿದ್ಯುತ್ ಸ್ಥಾವರಗಳ ಕಾರ್ಯಕ್ಷಮತೆ ಮತ್ತು ಸಾಧನೆಗಳು

| ಶಾಖೋತ್ಪನ್ನ ಕೇಂದ್ರ | ವರ್ಷ | ಉತ್ಪಾದನೆ ಗುರಿ ಮಿ.ಯೂ ಗಳಲ್ಲಿ | ಉತ್ಪಾದನೆ ಮಿ.ಯೂ ಗಳಲ್ಲಿ | ಪ್ಲಾಂಟ್ ಲೋಡ್ ಫ್ಯಾಕ್ಟರ್ (PLF %) | ವಿದ್ಯುತ್ ಘಟಕಗಳ ಲಭ್ಯತೆ ಅಂಶ (PAF %) |
|---|---|---|---|---|---|
| ರಾಯಚೂರು ಶಾಖೋತ್ಪನ್ನ ಕೇಂದ್ರ | 2022-23 | 9550 | 6582.62 | 43.69 | 72.91 |
| | 2023-24 | 8500 | 7875.64 | 52.13 | 58.73 |
| | 2024-25 | 7900 | 8310.351 | 55.16 | 66.88 |
| ಬಳ್ಳಾರಿ ಶಾಖೋತ್ಪನ್ನ ಕೇಂದ್ರ | 2022-23 | 6800 | 7096.65 | 47.65 | 74.00 |
| | 2023-24 | 9000 | 8208.47 | 54.97 | 61.07 |
| | 2024-25 | 9200 | 8182.269 | 54.94 | 65.64 |
| ಯರಮರಸ್ ಶಾಖೋತ್ಪನ್ನ ಕೇಂದ್ರ | 2022-23 | 6000 | 4739.40 | 33.81 | 39.40 |
| | 2023-24 | 6000 | 6229.25 | 44.32 | 46.82 |
| | 2024-25 | 8400 | 5914.340 | 42.20 | 62.59 |